ಅರಣ್ಯ ಕೈಗಾರಿಕ ನಿಗಮವು ಅರಣ್ಯ ಇಲಾಖೆಗೆ ಪಾಲಿಥಿನ್ ಚೀಲಗಳನ್ನು ಸರಬರಾಜು ಮಾಡುತ್ತಿರುವ ಬಗ್ಗೆ

3668 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಅರಣ್ಯ ಇಲಾಖೆಗೆ ಸಸಿಗಳನ್ನು ಬೆಳೆಸಲು ಪಾಲಿಥಿನ್ ಚೀಲಗಳನ್ನು ಸರಬರಾಜು ಮಾಡುತ್ತಿರುವುದು ನಿಜವೇ?*

ಆ) *ಜಿಲ್ಲಾ ಪರಿಷತ್‌ಗಳು ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಸ್ಥಳೀಯವಾಗಿ ಪಾಲಿಥಿನ್ ಚೀಲಗಳನ್ನು ಹೆಚ್ಚಿನ ದರದಲ್ಲಿ ಖರೀದಿಸುತ್ತಿರುವುದು ನಿಜವೇ?*

ಇ) *ಜಿಲ್ಲಾ ಪರಿಷತ್‌ಗಳು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವನ್ನು ಬಿಟ್ಟು ಬೇರೆ ಕಡೆಗಳಿಂದ ಪಾಲಿಥಿನ್ ಚೀಲಗಳನ್ನು ಖರೀದಿಸುವುದನ್ನು ತಡೆಯುವುದಕ್ಕೆ ಮತ್ತು ನಿಗಮವನ್ನು ಬಲಪಡಿಸಲು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೆ?*

ಶ್ರೀ ಈ.ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):

ಅ) ಹೌದು.

ಆ) ಕೆಲವು ಸಂದರ್ಭದಲ್ಲಿ ಮಾತ್ರ ಜಿಲ್ಲಾ ಪರಿಷತ್‌ಗಳು ಸರಕು ಖರೀದಿ ಇಲಾಖೆಯ ಅಧಿಕೃತ ಘರ್ಮಗಳ ಮೂಲಕ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಬೆಲೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕ ನಿಗಮವು ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಇದೆ.

ಇ) ಹೌದು, ಈ ಬಗ್ಗೆ ಇತ್ತೀಚೆಗೆ ದಿನಾಂಕ 12-8-91ರಲ್ಲಿ ಸರ್ಕಾರ ಆದೇಶಸಂಖ್ಯೆ ಎಹೆಚ್‌ಎಫ್‌ಎಫ್ 18 ಎಫ್‌ಎಸಿ 91ನ್ನು ಹೊರಡಿಸಿದೆ. ಇದರ ಪ್ರಕಾರ ಶೇಕಡ 75ರಷ್ಟನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಮೂಲಕ ಮತ್ತು ಶೇಕಡ 25 ರಷ್ಟನ್ನು ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾ ನಿಗಮದ ಮೂಲಕವೇ ಖರೀದಿಸಬೇಕೆಂದು ನಿಗದಿಸಿ ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

1992-93 ರ ಅರಣ್ಯೀಕರಣದ ಬಗ್ಗೆ ಕ್ರಮಗಳು

3503 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ಮುಂದೆ ಮುಂದಿನ ವರ್ಷ 1992-93 ಅರಣ್ಯೀಕರಣದ ಬಗ್ಗೆ ಯೋಜನೆ ನಿಮಿತ್ತ ಕಾರ್ಯಕ್ರಮಗಳಿವೆಯೇ?*

ಆ) *ಇದರ ಬಗ್ಗೆ ಆಯವ್ಯಯ ಹಂಚಿಕೆ ಮಾಡಲಾಗಿದೆಯೇ?*

ಇ) *ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಗುರಿಯನ್ನು ಸಾಧಿಸಿದೆಯೇ?*

ಈ) *ಗುರಿಯನ್ನು ಸಾಧಿಸದೆ ಇರಲು ಕಾರಣವೇನು?*

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಹೌದು.

ಆ) ಹೌದು. 1992-93ನೇ ಸಾಲಿನ ತಾತ್ಕಾಲಿಕ ಆಯ್ಯವ್ಯಯ ಹಂಚಿಕೆಯ